ಈ) ಹಳದಿ ಕಾರ್ಡುಗಳ ವಿತರಣೆಯಲ್ಲಿ ಲೋಪದೋಷಗಳು ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇದನ್ನು ಸರಿಪಡಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ರಾಮಲಿಂಗರೆಡ್ಡಿ (ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು):

ಅ) ರಾಜ್ಯದಲ್ಲಿ ನೈಜ ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳನ್ನು ಗುರ್ತಿಸಲು ಮನೆ ಮನೆ ಸಮೀಕ್ಷಾ ಕಾರ್ಯವು ನಡೆದಿದ್ದು, ಈ ಕಾರ್ಯವು ಪ್ರಗತಿಯಲ್ಲಿರುತ್ತದೆ. ಬೆಂಗಳೂರು ನಗರ, ಬಳ್ಳಾರಿ, ಬಾಗಲಕೋಟೆ ದಕ್ಷಿಣ ಕನ್ನಡ, ಕೊಡಗು, ಮೈಸೂರು ಈ ಜಿಲ್ಲೆಗಳಲ್ಲಿ ಸಮೀಕ್ಷೆ ನಡೆಸಿ ಅರ್ಹತೆ ಇರುವ ಕುಟುಂಬಗಳಿಗೆ ಹಳದಿ ಕಾರ್ಡುಗಳನ್ನು ವಿತರಿಸಲಾಗಿದೆ. ಹಾಗೂ ಅಂತಹವರಿಂದ ಹಸಿರು ಪಡಿತರ ಚೀಟಿಗಳನ್ನು ಹಿಂತೆಗೆದುಕೊಳ್ಳಲಾಗಿದೆ.

ಆ) ಉದ್ಭವಿಸುವುದಿಲ್ಲ.

ಇ) ರಾಜ್ಯದಲ್ಲಿ ಕಳೆದ 2 ವರ್ಷಗಳಲ್ಲಿ ವಿತರಿಸಲಾಗಿರುವ ಹಳದಿ ಪಡಿತರ ಚೀಟಿಗಳ ವಿವರ ಜಿಲ್ಲಾವಾರು ಮಾಹಿತಿ ಈ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಜಿಲ್ಲಾ ಕೇಂದ್ರದ ಹೆಸರು	ವಿತರಿಸಲಾಗಿರುವ ಹಳದಿ ಪಡಿತರ ಚೀಟಿಗಳು
1.	ಬೆಂಗಳೂರು ನಗರ	13,534
2.	ಬಳ್ಳಾರಿ	82,216
3.	ಬಾಗಲಕೋಟೆ	22,449
4.	ದಕ್ಷಿಣ ಕನ್ನಡ	32,537
5.	ಕೊಡಗು	10,545
6.	ಮೈಸೂರು	65,263
	ಒಟ್ಟು	2,26,544

ಈ) ಈಗಾಗಲೇ ವಿತರಿಸಲಾಗಿರುವ ಹಳದಿ ಪಡಿತರ ಚೀಟಿಗಳಲ್ಲಿ ಲೋಪದೋಷಗಳಾಗಿರುವುದು ಕಂಡುಬಂದಿರುವುದಿಲ್ಲ.

ರಾಜ್ಯದಲ್ಲಿರುವ ಸ್ತ್ರೀಶಕ್ತಿ ಸಂಘಗಳಿಗೆ ನೀಡುವ ಸಹಾಯಧನ

1428 (1775) ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ): ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸ್ತ್ರೀಶಕ್ತಿ ಸಂಘಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರಗಳನ್ನು ನೀಡುವುದು)

ಆ) ಸ್ತ್ರೀಶಕ್ತಿ ಸಂಘಗಳ ನಿರ್ವಹಣೆ ಮತ್ತು ಕಾರ್ಯಕ್ರಮಗಳೇನು? ಇದರ ಮೇಲ್ವಿಚಾರಣೆ ನೋಡಿಕೊಳ್ಳುವವರು ಯಾರು ಇವರಿಗೆ ಸರ್ಕಾರದಿಂದ ಸಹಾಯ ಧನ ನೀಡಲಾಗುತ್ತಿದೆಯೇ? ನೀಡುತ್ತಿದ್ದಲ್ಲಿ ಯಾವ ಪ್ರಮಾಣದಲ್ಲಿ ನೀಡಲಾಗುತ್ತಿದೆ.

ಇ) ಸ್ತ್ರೀಶಕ್ತಿ ಕಾರ್ಯಕ್ರಮಗಳಿಂದ ಮಹಿಳೆಯರಿಗೆ ಆಗಿರುವ ಅನುಕೂಲಗಳೇನು? (ಜಿಲ್ಲಾವಾರು ಮತ್ತು ವರ್ಗವಾರು ವಿವರಗಳನ್ನು ನೀಡುವುದು)

ಶ್ರೀ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):

ಅ) ರಾಜ್ಯದಲ್ಲಿ ಸ್ತ್ರೀಶಕ್ತಿ ಯೋಜನೆಯಡಿ 75660 ಸ್ವಸಹಾಯ ಗುಂಪುಗಳಿವೆ. ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳು ಗ್ರಾಮೀಣ ಮಹಿಳೆಯರಲ್ಲಿ ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆ ಹೊಂದಲು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ. ಸ್ವಸಹಾಯ ಗುಂಪುಗಳ ಮೇಲ್ವಿಚಾರಣೆಯನ್ನು ಗ್ರಾಮಮಟ್ಟದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಮಾಡುತ್ತಿದ್ದಾರೆ. ಇವರಿಗೆ ಪ್ರತಿ ಗುಂಪಿನ ಮೇಲ್ವಿಚಾರಣೆ ಮಾಡುವುದಕ್ಕೆ ಮಾಹೆಯಾನ ರೂ.50/- ಗಳನ್ನು ಪೋತ್ಸಾಹಧನದ ರೂಪದಲ್ಲಿ ಸರ್ಕಾರ ನೀಡುತ್ತಿದೆ.

ಇ) ಸ್ತ್ರೀಶಕ್ತಿ ಯೋಜನೆಯಿಂದ ಮಹಿಳೆಯರಿಗೆ ಈ ಕೆಳಕಂಡ ಅನುಕೂಲತೆಗಳು ಆಗಿರುತ್ತವೆ;

ಅ. ಗ್ರಾಮೀಣ ಮಹಿಳೆಯರ ಸಂಘಟನೆಗೆ ಹಾಗೂ ಶೋಷಣೆಯ ವಿರುದ್ಧ ಹೋರಾಡಲು ಪರಿಣಾಮಕಾರಿಯಾದ ವೇದಿಕೆಯನ್ನು ರೂಪಿಸದಂತಾಗಿದೆ.

ಆ. ಮಹಿಳೆಯರಲ್ಲಿ ಉಳಿತಾಯ ಮನೋಭಾವ ಬೆಳೆಸುವುದರೊಂದಿಗೆ ಅವರ ಸಣ್ಣಪುಟ್ಟ ಸಮಸ್ಯೆಗಳಿಗೆ ಆರ್ಥಿಕ ನೆರವು ದೊರೆತಂತಾಗಿದೆ.

ಇ. ಮಹಿಳೆಯರಲ್ಲಿ ಸಾಮಾಜಿಕ ಹಾಗೂ ಆರ್ಥಿಕ ಸ್ಥಿರತೆ ಮೂಡಲು ಸಹಾಯಕಾರಿಯಾಗಿದೆ.

ಈ. ಬ್ಯಾಂಕ್‌ಗಳಿಂದ ಆದಾಯೋತ್ಪನ್ನ ಚಟುವಟಿಕೆಗಳಿಗಾಗಿ ಸಾಲಸೌಲಭ್ಯ ದೊರೆಯುವುದು ಸುಲಭವಾಗಿದೆ.

ಉ. ವಿವಿಧ ಇಲಾಖೆಗಳಲ್ಲಿ ಮಹಿಳೆಯರಿಗಾಗಿ ಮೀಸಲಾಗಿರುವ ಅನುಕೂಲತೆಗಳನ್ನು ಪಡೆದುಕೊಳ್ಳಲು ಸಹಕಾರಿಯಾಗಿದೆ.

ಊ. ಪ್ರತಿ ಅರ್ಹ ಗುಂಪಿಗೆ ಸುತ್ತುನಿಧಿಗಾಗಿ ರೂ.5000/- ಗಳನ್ನು ನೀಡಲಾಗುತ್ತಿದೆ. ಮೇಲೆ ತಿಳಿಸಿದ ಸವಲತ್ತುಗಳನ್ನು ರಾಜ್ಯಾದ್ಯಂತ ಏಕಮುಖವಾಗಿ ಎಲ್ಲಾ ಗುಂಪಿನ ಸದಸ್ಯರಿಗೆ ನೀಡಲಾಗುತ್ತಿದೆ.

ಅನುಬಂಧ

ಸ್ತ್ರೀಶಕ್ತಿ ಯೋಜನೆಯಡಿ 30-6-2002ರ ಅಂತ್ಯದಂತೆ ರಚನೆಗೊಂಡಿರುವ ಸ್ವಸಹಾಯ ಗುಂಪುಗಳ ಹಾಗೂ ವುಗಳು ಉಳಿತಾಯ ನಾಡಿರುವ ಮೊತ್ತದ

ಜಿಲ್ಲಾವಾರು ವಿವರ: (ಲಕ್ಷ ರೂ.ಗಳಲ್ಲಿ)

ಕ್ರ.ಸಂ	ಜಿಲ್ಲೆಯ ಹೆಸರು	ರಚನೆಗೊಂಡಿರುವ ಗುಂಪುಗಳ ಸಂಖ್ಯೆ	ಈ ಗುಂಪುಗಳು ಉಳಿತಾಯ ಮಾಡಿರುವ ಒಟ್ಟು ಸಂಚಿತ ಮೊತ್ತ
1	2	3	4
1.	ಬೆಂಗಳೂರು (ನ)	1703	188.50
2.	ಬೆಂಗಳೂರು (ಗ್ರಾ)	3960	407.66
3.	ಬಾಗಲಕೋಟೆ	2673	211.89
4.	ಬೆಳಗಾಂ	7378	461.06
5.	ಬಳ್ಳಾರಿ	2736	172.73

6.	ಬೀದರ್	1808	216.71
1	2	3	4
7.	ಬಿಜಾಪುರ	2606	205.64
8.	ಚಾಮರಾಜನಗರ	2354	194.90
9.	ಚಿಕ್ಕಮಗಳೂರು	1388	157.42
10.	ಚಿತ್ರದುರ್ಗ	2195	555.47
11.	ದಾವಣಗೆರೆ	2986	294.76
12.	ದಕ್ಷಿಣ ಕನ್ನಡ	3010	210.99
13.	ಧಾರವಾಡ	1867	120.30
14.	ಗದಗ	1382	629.36
15.	ಗುಲ್ಬರ್ಗಾ	4304	524.75
16.	ಹಾಸನ	3009	332.06
17.	ಹಾವೇರಿ	3211	303.62
18.	ಕೊಡಗು	544	72.29
19.	ಕೋಲಾರ	4336	283.63
20.	ಕೊಪ್ಪಳ	1484	141.46
21.	ಮಂಡ್ಯ	3446	782.78
22.	ಮೈಸೂರು	3811	327.29
23.	ರಾಯಚೂರು	2488	112.39
24.	ಶಿವಮೊಗ್ಗ	2278	218.99
25.	ತುಮಕೂರು	5459	572.01
26.	ಉಡುಪಿ	1901	170.95
27.	ಉತ್ತರ ಕನ್ನಡ	1343	55.19
	ಒಟ್ಟು	75660	7924.82

ರಾಜ್ಯದಲ್ಲಿ ನ್ಯಾಯಬೆಲೆ ಅಂಗಡಿಗೆ ಸೀಮೆಎಣ್ಣೆ ಪೂರೈಕೆ

1429 (1655) ಶ್ರೀ ಸುಣಗಾರ ಶರಣಪ್ಪ ತಿಪ್ಪಣ್ಣ (ಸಿಂಧಗಿ): ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ನ್ಯಾಯಬೆಲೆ ಅಂಗಡಿಗಳಿಗೆ ಜಿಲ್ಲೆಗಳಿಂದ ಅಥವಾ ತಾಲ್ಲೂಕಿನಿಂದ ಗ್ರಾಮೀಣ ನ್ಯಾಯಬೆಲೆ ಅಂಗಡಿಗಳಿಗೆ ಸೀಮೆಎಣ್ಣೆ ಯಾವ ರೀತಿಯಿಂದ ಒದಗಿಸಲಾಗುತ್ತಿದೆ; ರಾಜ್ಯದಲ್ಲಿ ರೂಪಿಸಿರುವ ನೀತಿಗಳೇನು;

ಆ) ಕೇಂದ್ರ ಸ್ಥಾನದಿಂದ ಸೀಮೆಎಣ್ಣೆಯನ್ನು ಗ್ರಾಮೀಣ ಪ್ರದೇಶಕ್ಕೆ ಸ್ವಂತ ವಾಹನ ದೊಂದಿಗೆ ತಂದು ಹೆಚ್ಚಿನ ದರದಲ್ಲಿ ಮಾರಾಟ ಮಾಡುತ್ತಿರುವುದು ಮತ್ತು ತರುವಾಗ ಅಕ್ರಮವಾಗಿ ಬ್ಲಾಕ್‌ನಲ್ಲಿ